ಎರಡು ಬಾರಿ ಹೇಳುವಂತಹ ಅಗತ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿ, ಯಾವರೀತಿ ಔಚಿತ್ಯಪೂರ್ಣವಾದ ಕಾರ್ಯಕ್ರಮವನ್ನು ಹಾಕಿ ಕೊಳ್ಳಬೇಕೆಂದು, ಎಲ್ಲರನ್ನು ಕರೆಸಿ, ಕೇಳಿ ನಿರ್ಣಯವನ್ನು ತೆಗೆದು ಕೊಳ್ಳಲಾಗುವುದು.

ಅಧ್ಯಕ್ಷರು : ಈಗ ಬಿಲ್ಲುಗಳನ್ನು ತೆಗೆದುಕೊಳ್ಳೋಣ, ಮೊದಲನೆಯದಾಗಿ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2005

4. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಅ) ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಈ ವಿಧೇಯಕದ ಬಗ್ಗೆ ಮಾನ್ಯ ಸಚಿವರು ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಮಸೂದೆಗೆ ಮೇಲ್ಮನೆಯಲ್ಲಿ ಅನುಮತಿ ಸಿಕ್ಕಿದೆ, ಮುಖ್ಯವಾಗಿ ಆರ್.ಬಿ.ಐ.ನವರ ಗೈಡ್‌ಲೈನ್ಸ್ ಪ್ರಕಾರ ಅಥವಾ ಆದೇಶದ ಪ್ರಕಾರ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಏಕೆಂದರೆ ಯಾವಾಗಲೂ ಈ ಸೌಹಾರ್ದ ಕಾಯ್ದೆಯಡಿ ಈ ಸೌಹಾರ್ದ ಸಂಸ್ಥೆಗಳು ಕೆಲಸ ಮಾಡಬೇಕಾದರೆ "ಎನ್.ಸಿ.ಡಿ.ಸಿ ನಬಾರ್ಡ್: ಆರ್.ಬಿ.ಐ" ನವರು ಬ್ಯಾಂಕಿನ ರೆಗ್ಯುಲೇಷನ್ ಆಕ್ಟ್‌ನ ಪ್ರಕಾರವೇ ಕೆಲಸ ಮಾಡಬೇಕಾಗುತ್ತದೆ. ಹಾಗಾಗಿ ನಾವು ಇಲ್ಲಿ "ಕೋ-ಆಪರೇಟಿವ್" ಎನ್ನುವ ಶಬ್ದ ಹಾಕಿದ್ದೇವೆ. ಅದನ್ನು "ಕೋ-ಆಪರೇಟಿವ್ ಸೊಸೈಟಿ" ಎಂಬ ಶಬ್ದವನ್ನು ಹಾಕಿ ಎಂದು ಹೇಳಿದ್ದಾರೆ. ಬ್ಯಾಂಕಿನ ಬಿಸಿನೆಸ್ ಬಗ್ಗೆ ಒಂದು ವರ್ಡ ಸೇರಿಸಲಿಕ್ಕೆ ಹೇಳಿದ್ದಾರೆ. ಇಲ್ಲಿ 1"ಅಪೀಲ್" ಎನ್ನುವ ಪ್ರಾವಿಷನ್ ಏನು ಇದೆ, ಅದನ್ನು "ರಿಜಿಸ್ಟರ್‌ನಲ್ಲಿ ಅಪೀಲ್" ಎಂದು ಪ್ರಾವಿಷನ್ ಮಾಡಿದ್ದಾರೆ. ಹಾಗಾಗಿ ಇದು ಟೆಕ್ನಿಕಲಿ ಆರ್.ಬಿ.ಐ.ನವರ ಗೈಡ್‌ಲೈನ್ಸ್‌ನವರ ಪ್ರಕಾರ, ಇವತ್ತಿನ ಪರಿಸ್ಥಿತಿಗೆ ಅಪೀಲ್‌ಗೆ ಅವಶ್ಯಕತೆ ಬೇಕಾಗಿರುವುದರಿಂದ ಈ ವ್ಯವಸ್ಥೆಯನ್ನು ಮಾಡಿ ಈ

ಬಿಲ್ಲನ್ನು ನಾವು ಮಂಡಿಸಿದ್ದೇವೆ. ಇದನ್ನು ಈ ಮನೆ ಒಪ್ಪಿಕೊಳ್ಳಬೇಕೆಂದು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2005 ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾಗಿ ಈಗ ವಿಧಾನಸಭೆಯಲ್ಲಿ ಚರ್ಚೆಗೆ ಬಂದಿದೆ, ಮಾನ್ಯ ಸಚಿವರು ಹೇಳಿದ ಹಾಗೆ ರಿಸರ್ವ ಬ್ಯಾಂಕನವರು ನೀಡಿರುವ ಸಲಹೆಯ ಮೇರೆಗೆ ಈ ಮಸೂದೆಯನ್ನು ಅಂಗೀಕರಿಸಬೇಕೇ ಎಂಬ ಸಂದರ್ಭದಲ್ಲಿ ನಾವಿದ್ದೇವೆ; ಅದರೆ ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, 1997ನೇ ಇಸವಿಯಿಂದ, ನಮ್ಮ ರಾಜ್ಯದಲ್ಲಿ ಈ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಕಾಯ್ದೆ ಜಾರಿಗೆ ಬರಬೇಕು ಎಂಬ ಬಗ್ಗೆ ಸಾಕಷ್ಟು ಬಾರಿ ವಿಸ್ತೃತವಾಗಿ ಚರ್ಚೆಯಾಗಿದೆ. ಆದರೆ ಈಗ ಈ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನೇನು ಜಾರಿಗೊಳಿಸಿದ್ದೀರಿ, ಆದರೆ ಮಾನ್ಯ ಸಹಕಾರಿ ಸಚಿವರಾಗಿ ಶ್ರೀ ದೇಶಪಾಂಡೆಯವರು ಈಗ ಅಧಿಕಾರವನ್ನು ತೆಗೆದುಕೊಂಡಿದ್ದಾರೆ, ಅದರ ಹಿಂದಿನ ಸರ್ಕಾರದ ಅವಧಿಯಲ್ಲಿ ಈ ಸೌಹಾರ್ದ ಕಾಯ್ದೆಗೆ ಏನು ತಿದ್ದುಪಡಿಗಳು ಆಯಿತು. ಆ ತಿದ್ದುಪಡಿಗಳಿಂದಾಗಿ ಈ ದಿವಸ ಈ ಸೌಹಾರ್ದ ಕಾಯ್ದೆ ತನ್ನ ಮಹತ್ವವನ್ನೇ ಕಳೆದುಕೊಂಡಿದೆ, ಈಗ ರಿಸರ್ವ ಬ್ಯಾಂಕ್‌ನವರ ಆಗ್ರಹವಿದೆಯೆಂದು ಈ ತಿದ್ದುಪಡಿಯನ್ನು ನಾವು ಸ್ವೀಕರಿಸುವಂತಹ ಅನಿವಾರ್ಯವಿದೆ, ಅದರೆ ಸರ್ಕಾರದ ಹಸ್ತಕ್ಷೇಪ ಇಲ್ಲದಿರುವ ರೀತಿಯಲ್ಲಿ ಸಹಕಾರಿ ಕ್ಷೇತ್ರವನ್ನು ಇಡೀ ದೇಶದಲ್ಲಿ ಅನೇಕ ಸಮಿತಿಗಳು ವರದಿಗಳನ್ನು ಕೊಟ್ಟಿವೆ, ಇದಕ್ಕೆ ಆಂಧ್ರ ಮಾದರಿಯಾಗಿ ಕೆಲಸವನ್ನು ಮಾಡುತ್ತಿದೆ, ಆ ರೀತಿಯಲ್ಲಿ ಕರ್ನಾಟಕದಲ್ಲೂ ಸಹ ಆಗಬೇಕು ಸಹಕಾರಿ ತತ್ವ ಬಂದು ಇವತ್ತಿಗೆ ನೂರು ವರ್ಷಕ್ಕೆ ಹೆಜ್ಜೆಯನ್ನು ನಾವಿಟ್ಟಿದ್ದೇವೆ. ಹಾಗಾಗಿ ಕರ್ನಾಟಕ ಬಹಳ ಮುಂಚೂಣಿಯಲ್ಲಿದ್ದಂತಹ ಕ್ಷೇತ್ರ, ಹಾಗಾಗಿ ಸಹಕಾರಿ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಇಲ್ಲದಿರುವಂತೆ ಈ ಒಂದು ಸೌಹಾರ್ದ ಕಾಯ್ದೆ ಜಾರಿಗೊಂಡಿತು. ಆದರೆ, ಸರ್ಕಾರ ಮತ್ತಷ್ಟು ಹಸ್ತಕ್ಷೇಪ ಮಾಡಿ, ಕಾಯಿದೆಗೆ ಅನೇಕ ರೀತಿಯ ತಿದ್ದುಪಡಿ ತಂದು, ಮತ್ತೆ ನಮ್ಮ ಸಹಕಾರಿ ಕಾಯಿದೆ ಏನಿದೆ, ಅದೇ ರೀತಿ ಸೌಹಾರ್ದ ಕಾಯಿದೆಯೂ ಆಗುತ್ತಾ ಇರುವಂಥ ಸಂದರ್ಭವನ್ನು ನಾವು ಎದುರಿಸುತ್ತ ಇದ್ದೇವೆ. ಹಾಗಾಗಿ, ಸೌಹಾರ್ದ ಕಾಯಿದೆಗೆ ಇಲ್ಲದೇ ಇರುವಂಥ ಅನೇಕ ರೀತಿಯ ಇತಿಮಿತಿಗಳನ್ನು ಹಿಂದಿನ ಸರ್ಕಾರದಲ್ಲಿ ತಂದು, ಈಗ ಅನೇಕರು ಸೌಹಾರ್ದಕ್ಕೆ ಹೋಗಲು ಬಯಸದೇ ಇರುವಂಥ ಸ್ಥಿತಿ

ಬರುತ್ತಾ ಇದೆ. ಹಾಗಾಗಿ, ನಾನು ಸರ್ಕಾರವನ್ನು ಆಗ್ರಹಿಸುವುದು, ಈ ಸಂದರ್ಭದಲ್ಲಿ ಸೌಹಾರ್ದ ಕಾಯಿದೆಗೆ ಹೆಚ್ಚು ಸಹಕಾರಿ ಸಂಸ್ಥೆಗಳು, ಸಂಘಗಳು ಹೋಗುವುದಕ್ಕೆ ಅವರಿಗೆ ಹೆಚ್ಚು ಪ್ರೋತ್ಸಾಹದಾಯಕವಾದಂಥ ರೀತಿಯಲ್ಲಿ, ಸರ್ಕಾರದ ಹಸ್ತಕ್ಷೇಪ ಕಡಿಮೆಯಾಗುವಂಥ ರೀತಿಯದಲ್ಲಿ ಬರುವಂಥ ದಿನದಲ್ಲಿ ಸರ್ಕಾರ ಜವಾಬ್ದಾರಿಯುತವಾದ ಯೋಚನೆಯನ್ನು ಮಾಡಿ ಅಗತ್ಯ ತಿದ್ದುಪಡಿಯನ್ನು ತರಬೇಕು. ಈಗೇನು ಹಿಂದೆ ಮಾಡಿರುವುದು ಇದೆ, ಅದರಲ್ಲಿ ಕೆಲವನ್ನು ಹಿಂತೆಗೆದುಕೊಂಡು, ಇನ್ನೂ ಅಗತ್ಯವಾದಂಥ ರೀತಿಯಲ್ಲಿ, ಸೌಹಾರ್ದ ಕಾಯಿದೆ ಇನ್ನಷ್ಟು ವಿಶ್ವಾಸಪೂರ್ಣವಾಗಿ ಜಾರಿಗೊಳ್ಳುವಂಥ ರೀತಿಯಲ್ಲಿ ಮುಂದೆ ಹೋಗಬೇಕಾದಂಥ ಅಗತ್ಯತೆ ಇದೆ, ಆ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಹೇಳುತ್ತಾ, ಇದು ರಿಸರ್ವ ಬ್ಯಾಂಕಿನ ಸೂಚನೆ ಮೇರೆಗೆ ಏನು ಈ ತಿದ್ದುಪಡಿಯನ್ನು ತರುತ್ತಾ ಇದ್ದೇವೆ, ಇದರ ಬಗ್ಗೆ ಹೇಳುವಂಥ ಅಗತ್ಯವಿಲ್ಲ. ಆದರೆ, ಮೂಲ ಕಾಯಿದೆಗಳಲ್ಲಿ ಏನು ಅಗತ್ಯ ತಿದ್ದುಪಡಿಯಾಗಬೇಕು, ಅದರ ಬಗ್ಗೆ ಸರ್ಕಾರ ಯೋಚಿಸಬೇಕೆಂಬ ಆಗ್ರಹವನ್ನು ಸರ್ಕಾರಕ್ಕೆ ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾದುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿಶ್ವೇಶ್ವರ ಹೆಗಡೆಯವರ ಮಾತನ್ನು ನಾನು ಅನುಮೋದಿಸುತ್ತೇನೆ. ಸನ್ಮಾನ್ಯ ಎಸ್.ಎಸ್. ಪಾಟೀಲರು ಈ ಕಾಯಿದೆ ತಂದಾಗ, ಇಲ್ಲಿ ಮಾಡಿರುವ ಭಾಷಣದ ಪ್ರತಿಯನ್ನು ತಾವು ತೆಗೆದು ಓದಬೇಕು, ನಾವು ಅವತ್ತೂ ತಕರಾರು ಮಾಡಿದೆವು. ಎರಡು ರೀತಿಯ ಸಹಕಾರ ಸಂಘಗಳನ್ನು ಕರ್ನಾಟಕದಲ್ಲಿ ಏಕೆ ಮಾಡುವುದಕ್ಕೆ ಹೊರಟಿದ್ದೀರಿ ಎಂದು ಕೇಳಿದ್ದೆವು. ಎಸ್.ಎಸ್. ಪಾಟೀಲರು ಬಹಳ ಆಸೆ ಇಟ್ಟುಕೊಂಡು ಈ ಕಾಯಿದೆ ತಂದಾಗ ನಾವು ತಕರಾರು ಮಾಡಿದ್ದೆವು. ಸಹಕಾರ ಸಂಘಗಳು, ಸರ್ಕಾರದ ಹಿಡಿತದಿಂದ ಆಚೆ ಬರಬೇಕು, ಕಾನೂನಿನ ಬಿಕ್ಕಟ್ಟನ್ನು ಕಡಿಮೆ ಮಾಡಿಕೊಳ್ಳಬೇಕು, ಸರ್ಕಾರದ ನೆರವಿಲ್ಲದಂಥ ಸಹಕಾರ ಸಂಘಗಳು, ಅವರ ವ್ಯವಸ್ಥೆಯನ್ನು, ಅವರು ಮಾಡುವುದಕ್ಕೆ ಅನುವಾಗುವುದಕ್ಕೆ ಸೌಹಾರ್ದ ಸಹಕಾರಿ ಕಾಯಿದೆಯನ್ನು ಇಲ್ಲಿ ತಂದಿದ್ದೇವೆಂದು ಹೇಳುತ್ತೀರಿ. This is a different Act altogether. This is not under Co-operative Act, if I am right. ಸೌಹಾರ್ದ ಸಹಕಾರಿ ಸಂಘದ ಹೊಸ ಕಾಯಿದೆಯನ್ನೆ ಅವತ್ತು ತಂದರು. ಈಗ ಆ ಕಾಯಿದೆಯನ್ನು, ಸಹಕಾರಿ ಸಂಘಗಳ ಕಾಯಿದೆ ಕೆಳಗೆ ತರುವುದಕ್ಕೆ ಹೊರಟಿರುವ ತಿದ್ದುಪಡಿ ಇದು. ಬಹಳ ಸುಲಭವಾದ ಮಾತಲ್ಲ. ಎರಡನೇಯದು ಇಲ್ಲಿ ಏನಾಗಿದೆ, "ಸಹಕಾರಿ ಸಂಘಗಳ

ಅಧಿನಿಯಮದಡಿ ನೋಂದಣಿಯಾದ ಸಹಕಾರಿಯನ್ನು ಬ್ಯಾಂಕಿಂಗ್ ನಿಯಂತ್ರಣದ ಅಧಿನಿಯಮದಲ್ಲಿ ತರುವುದು" ಎಂಬುದಾಗಿ ನೀವು ಹೇಳಿದ್ದೀರಿ. ಸಾರ್ ಕೋ–ಆಪರೇಟಿವ್ ಸೊಸೈಟಿ ಎಂದು ಕರೆಯಿರಿ ಎಂದು ಹೇಳುತ್ತೀರಿ. ರಿಸರ್ವ್ ಬ್ಯಾಂಕ್ ಮಾರ್ಗಸೂಚಿಗಳು ಇವೆಯೆಂದು ಹೇಳುತ್ತೀರಿ. RBI cannot give direction to Co-operative Societies. ಲೋನ್ ರೀ ಇಂಬರ್ಸ್‌ಮೆಂಟ್ ಮಾಡುವುದು ನಬಾರ್ಡ್ ಸ್ಟ್ರಕ್ಚರಲ್ ಡಿಫರೆನ್ಸ್ ಏನಾದರೂ ಇದ್ದರೆ, ನಬಾರ್ಡ್‌ನವರು ಹೇಳಿದ್ದಾರೆಂದರೆ ಒಪ್ಪಬಹುದು. But how can the Reserve Bank of India govern a co-operative society?ನನಗೆ ಗೊತ್ತಾಗಲಿಲ್ಲ. This is not a bank registered under the Reserve Bank of India guidelines. ಇದಕ್ಕೆ ನೀವು ಹೇಳಬೇಕು.ಇದನ್ನು ನೀವೇ ಹೇಳುತ್ತೀರಿ"ಒಂದು ಸಹಕಾರ ಸಂಘ ಎಂದು ಭಾವಿಸತಕ್ಕದ್ದು" ನೀವು"ಸಹಕಾರ ಬ್ಯಾಂಕ್" ಎಂದು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ನೀವು ಎಲ್ಲದಕ್ಕೂ 50 ಲಕ್ಷ ರೂಪಾಯಿಗಳ ಷೇರು ಇಟ್ಟು, ಸಾವಿರ ಜನ, ಸಾವಿರದ ಐನೂರು ಜನಕ್ಕಿಂತ ಜಾಸ್ತಿ ಸದಸ್ಯರಿಟ್ಟು ಒಂದು ಬ್ಯಾಂಕನ್ನು ನೀವೇನು ರಿಜಿಸ್ಟರ್ ಮಾಡುತ್ತೀರಿ, ಆಟೋಮ್ಯಾಟಿಕ್ ಆಗಿ ಆ ಬ್ಯಾಂಕನ್ನು ರಿಸರ್ವ್ ಬ್ಯಾಂಕಿಗೆ ಗವರ್ನ್ ಮಾಡಬಹುದು. ಆ ಬ್ಯಾಂಕಿಗೆ, ರಿಜರ್ವ್ ಬ್ಯಾಂಕ್ ಡೈರೆಕ್ಷನ್ಸ್ ಕೊಡಬಹುದು. ನೀವೇ ಸ್ಪಷ್ಟವಾಗಿ ಹೇಳುತ್ತೀರಿ; ಸಹಕಾರಿ ಸಂಘ, I can register a co-operative society with fifty members and with a meagre amount of shareholdings. ನೀವು ಇದನ್ನು, ಅವರು ಹೇಳಿದ ಹಾಗೆ ಪರೋಕ್ಷವಾಗಿ ಮತ್ತೆ ನಿಮ್ಮ ಕ್ಲಬ್‌ಗೆ ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ. ಅದರಲ್ಲಿ ಎಲ್ಲಿದೆ, ಮುಂದಕ್ಕೆ ನೋಡಿ. 2ನೇ ಪ್ರಕರಣ ತಿದ್ದುಪಡಿ ಮಾಡುವುದಕ್ಕೆ ತಾವು ಕೊಟ್ಟಿರುವ ಕಾರಣಗಳಲ್ಲಿ "ನಿರ್ದೇಶಕರ ಅನರ್ಹತೆಯನ್ನು ನಿರ್ಧರಿಸಿ ತೀರ್ಮಾನಿಸುವ ಅಧಿಕಾರವನ್ನು ಸಂಯುಕ್ತ ಸಹಕಾರಿಗೆ ಮತ್ತು ಸಂಯುಕ್ತ ಸಹಕಾರಿಯ ಅದೇಶದ ಅಪೀಲನ್ನು ತೀರ್ಮಾನಿಸುವ ಅಧಿಕಾರವನ್ನು ರಿಜಿಸ್ಟ್ರಾರ್‌ರಿಗೆ ನೀಡುವುದು" ಎಂದು ಹೇಳುತ್ತೀರಿ. ರಿಜಿಸ್ಟ್ರಾರ್‌ರಿಗೆ ನೀಡುವುದು ಎಂದರೆ ಸನ್ಮಾನ್ಯ ಕೋ ಅಪರೇಟಿವ್ ಮಿನಿಸ್ಟರಿಗೆ ನೀಡುವುದು ಎಂದೇ ಅರ್ಥ. ಇದರಲ್ಲಿ ಬೇರೆ ಏನೂ ಇಲ್ಲ. ಈ ರಾಜ್ಯದಲ್ಲಿ ರಿಜಿಸ್ಟ್ರಾರ್‌ರನ್ನು ಅಟಾನಮಸ್ ಆಗಿ ಅಥವಾ ಇಂಡಿಪೆಂಡೆಂಟ್ ಬಾಡಿಯಾಗಿ ಮಾಡಿಲ್ಲ. The registrar is still under the control of government, under Co-operation Department or Co-operation Secretariat.

ನೀವು ಎಲ್ಲಾ ಅಪೀಲು ತೆಗೆದುಕೊಂಡು, ನೀವೇ ತೀರ್ಮಾನ ಮಾಡುವುದಾದರೆ, ಇದನ್ನು ಸೌಹಾರ್ದ ಸಹಕಾರ ಸಂಘ ಎಂದು ನೀವೇಕೆ ಕರೆಯುತ್ತೀರಿ? How can you interefere in all these things? .....ಅವರ ಬೋರ್ಡನಲ್ಲಿ ಯಾರಿಗೋ ಅನರ್ಹತೆ ಬಂದು, ಅವರ ಬೋರ್ಡ್‌ನಲ್ಲಿ ವೇಕೆನ್ಸಿ ಕ್ರಿಯೇಟ್ ಆದರೆ, ನಿಮ್ಮ ಹತ್ತಿರ ಅಪೀಲು ತೆಗೆದುಕೊಳ್ಳತಕ್ಕ ಸ್ಥಿತಿಯನ್ನು ಏಕೆ ನಿರ್ಮಾಣ ಮಾಡಿದ್ದೀರಿ, when you have no investment there? ಸೌಹಾರ್ದ ಕಾಯಿದೆ ತಂದ ಒಂದೇ ಉದ್ದೇಶಕ್ಕೆ ನಮ್ಮಿಂದ ಯಾವ ನೆರವನ್ನು ತೆಗೆದುಕೊಂಡಿಲ್ಲದವರು ಅವರ ಪಾಡಿಗೊಂದು ವ್ಯವಸ್ಥೆ ಮಾಡಿಕೊಂಡು ಹೋಗಲಿ. ನಾವು ಆಡಿಟ್ ಮಾಡಿಸುವಷ್ಟು ಜವಾಬ್ದಾರಿ ಇಟ್ಟುಕೊಳ್ಳೋಣ, ಸರ್ಕಾರದವರು ಬಿಟ್ಟರೆ ಬೇರೆಯವರು ಇಲ್ಲ ಎಂದು. ಆದರೆ, ಇವತ್ತು ಇಡೀ ಪ್ರಿನ್ಸಿಪಲ್‌ಗೇ ವಿರುದ್ಧವಾದಂಥ ತಿದ್ದುಪಡಿಯನ್ನು ತಾವು ಪ್ರಪೋಸ್ ಮಾಡುತ್ತಿದ್ದೀರಿ. ಆಕಸ್ಮಿಕ ಖಾಲಿ ಸ್ಥಾನ ಭರ್ತಿ ಮಾಡುವುದನ್ನು ಕೂಡ ನೀವೇಕೆ ಸಜೆಸ್ಟ್ ಮಾಡುತ್ತೀರಿ. ಅದನ್ನು ಬೋರ್ಡ್‌ಗೇ ಬಿಟ್ಟುಬಿಡಿ. ಅಲ್ಲಿರುತ್ತಾರೆ, ಅವರು ಹಣ ಹಾಕಿರುತ್ತಾರೆ, ಬಂಡವಾಳ ಹಾಕಿರುತ್ತಾರೆ, ಅವರ ವ್ಯವಹಾರ ಅವರು ಮಾಡಿಕೊಳ್ಳುವುದಕ್ಕೆ ಸಮರ್ಥರಿರುತ್ತಾರೆ. ಅದಕ್ಕೋಸ್ಕರವೇ ಇದೊಂದು ಸೌಹಾರ್ದ. ಅವರವರಲ್ಲೇ ಅನ್ಯೋನ್ಯತೆ ಇಟ್ಟುಕೊಂಡು ಮಾಡಿಕೊಳ್ಳುವ ಸಹಕಾರ ಸಂಘ, ನಮ್ಮ ಕೆಳಗೆ ಬರಬಾರದು ಎಂದು ಮಾಡಿರುವ ಸಂಘಕ್ಕೆ ಇಷ್ಟೊಂದು ತಿದ್ದುಪಡಿಗಳನ್ನು ತರುವುದು, ಮತ್ತೆ ರಿಜಿಸ್ಟ್ರಾರ್ ಕಂಟ್ರೋಲ್‌ಗೆ ತರುವುದು ಮತ್ತೆ ನೀವು ಒರಿಜಿನಲ್ ಕೋ-ಆಪರೇಟಿವ್ ಆಕ್ಟ್ ಕೆಳಗಡೆ ತರುವುದಕ್ಕೆ ಹೊರಟಿರುವುದು ಅಷ್ಟೊಂದು ಗೌರವ ತರುವ ಕೆಲಸವಲ್ಲ. ರಿಸರ್ವ್ ಬ್ಯಾಂಕ್ ಏನು ಗೈಡ್‌ಲೈನ್ಸ್ ಕೊಟ್ಟಿದೆ ಎಂಬುದನ್ನು ಸ್ವಲ್ಪ ತಾವು ಹೇಳಬೇಕಾಗುತ್ತದೆ. Because, as I know, the Reserve Bank cannot give guidelines to cooperative societies. ಬ್ಯಾಂಕಿಗೆ ಕೊಡಬೇಕು. Banks are registered under their direction. ಅವರ ಅಪ್ರೂವಲ್ ಜೊತೆಯಲ್ಲೇ ಆಗುತ್ತೆ. ಕೋ-ಆಪರೇಟಿವ್ ಸೊಸೈಟೀಸ್ ರಿಜಿಸ್ಟರ್ ಮಾಡುವುದು ಕರ್ನಾಟಕ ಸರ್ಕಾರ. ಇದನ್ನಂತೂ ಅವರೂ ಮಾಡುವ ಹಾಗೆ ಇಲ್ಲ. ರಿಜಿಸ್ಟ್ರೇಷನ್ ಮಾಡಿಕೊಳ್ಳುವುದು, ಬಿಡುವುದು, ವ್ಯವಹಾರ ಮಾಡಿಕೊಳ್ಳುವುದು ಅವರ ಸ್ವಂತ ವಿಚಾರ. ನೀವೇನೂ ಗವರ್ನಮೆಂಟಿನಿಂದ ಬೆನಿಫಿಟ್ಸ್ ಕೇಳುವ ಹಾಗೆ ಇಲ್ಲ. ನಿಮ್ಮ ಸಹಕಾರ ಸಂಘ, ನೀವು ಮಾಡಿ, ನಾವು ನೋಂದಣಿ ಮಾಡುತ್ತೇವೆ, ಆಡಿಟ್‌ಗೆ ಅವಕಾಶ

ಕೊಡುತ್ತೇವೆ, ಬಹುಶ: ಈ ಎರಡೇ ಕಾಯಿದೆಯಲ್ಲಿ ಸರ್ಕಾರಕ್ಕೆ ಅಧಿಕಾರ ಇದ್ದುದು. ಆದರೆ, ಇವತ್ತು ಒಂದೊಂದೇ, ಒಂದೊಂದೇ ತಿದ್ದುಪಡಿಗಳನ್ನು ಮಾಡಿಕೊಂಡು, ಇದನ್ನು ಕೂಡ ನೀವು ಪ್ಯಾರಲೆಲ್ ಕೋ–ಆಪರೇಟಿವ್ ಸೊಸೈಟಿ ಮಾಡುವುದಕ್ಕೆ ಹೊರಟಿರುವುದು ತಪ್ಪು. ನೀವು ಇನ್ನೊಂದು ಸಲ ಆಲೋಚನೆ ಮಾಡಬೇಕೆಂದು, ನಿಮ್ಮ ಮೂಲಕ ಅವರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಮಹಿಮಾ ಪಟೇಲ್ (ಚನ್ನಗಿರಿ) : ಮಾನ್ಯ ಅಧ್ಯಕ್ಷರೆ, ಸಹಕಾರಿ ಕಾಯಿದೆಗೆ ತಿದ್ದುಪಡಿ ಬರುತ್ತಾ ಇದೆ. ಮೊದಲನೆಯದಾಗಿ, ಈ ಸಹಕಾರ, ಸೌಹಾರ್ದ ಇವೆಲ್ಲಾ ಮನುಷ್ಯನ ನ್ಯಾಚುರಲ್ ವೇ ಆಫ್ ಬೀಯಿಂಗ್ ಇದು. ನ್ಯಾಚುರಲ್ ಆಗಿ ಇರಬೇಕಾದ್ದು. ಸಹಕಾರ ಎನ್ನುವುದೊಂದು ಕಾಯಿದೆಯಾಗಿರುವುದನ್ನೇ ನಾವೆಲ್ಲರೂ ಯೋಚನೆ ಮಾಡಬೇಕಾಗಿರುವುದು. ಸಹಕಾರ ಎನ್ನುವುದು ಮನುಷ್ಯನಿಗೆ ನ್ಯಾಚುರಲ್ ಆಗಿ ಇರಬೇಕಾಗುತ್ತೆ. ಅದಕ್ಕೆ ಕಾಯಿದೆಯಾಗಿದೆ. ಅದಕ್ಕೊಂದು ತಿದ್ದುಪಡಿ ಬೇರೆ ಬರುತ್ತಾ ಇದೆ; ಸೌಹಾರ್ದ ಎಂದು. ಮುಂದೆ ಇದಕ್ಕೊಂದು ತಿದ್ದುಪಡಿ ತರಬೇಕಾಗುತ್ತೆ. ಸಹಕಾರ, ಸೌಹಾರ್ದ ಎಂಬುದರ ಜೊತೆಗೆ ' ಸಂತುಷ್ಟಿ ' ಎಂಬ ಇನ್ನೊಂದು ತಿದ್ದುಪಡಿ ತರಬೇಕಾದಂಥ ಪರಿಸ್ಥಿತಿ ಬರಬಹುದೇನೋ ಎಂಬುದು ನನ್ನ ಆತಂಕ. ಈ ಸಹಕಾರ ಎಂಬುದು ನಮ್ಮೆಲ್ಲರ ಜೀವನದ ರೀತಿಯಾಗಬೇಕು, ಸೌಹಾರ್ದ ಎಂಬುದೂ ಕೂಡ ಎಲ್ಲರ ಜೀವನದ ರೀತಿಯಾಗಬೇಕು. ಅದೇ ತರಹ "ಸಂತುಷ್ಟಿ" ಕೂಡ ನಮ್ಮ ಜೀವನದ ರೀತಿಯಾಗಬೇಕು. ಮುಂದೆ ಇದೊಂದು ಬಿಲ್ ಆಗಿ ಬರುವ ಅವಶ್ಯಕತೆ ಇಲ್ಲವೆಂಬುದು ನನ್ನ ಅಭಿಮತ. ವಂದನೆಗಳು.

(ಸನ್ಮಾನ್ಯ ಉಪಾಧ್ಯಕ್ಷರು, ಅಧ್ಯಕ್ಷಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕ ನ್ಯಾಯಾಲಯದ ಅದೇಶದ ಮೇರೆಗೆ ಬರುವಂಥಾದ್ದು ಇದ್ದರೂ ಕೂಡ, ಇದಕ್ಕೆ ಪೂರಕವಾದ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸಚಿವರು ಇತ್ತೀಚಿಗೆ ಕೋ–ಆಪರೇಟಿವ್ ಬ್ಯಾಂಕಿಗೆ ಸಂಬಂಧಪಟ್ಟಂತೆ ಮಂಗಳೂರಿನಲ್ಲಿ ಒಂದು ದೊಡ್ಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಲ್ಲಿ ಉಲ್ಲೇಖವಾಗಿರುವ ಅಂಶವನ್ನೂ ಕೂಡ ಇದಕ್ಕೆ ಪೂರಕವಾಗಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಇಲ್ಲಿ ವಿಶೇಷ ಎಂದರೆ, ಕರ್ನಾಟಕ ರಾಜ್ಯದಲ್ಲಿ ನಾವು ಸಹಕಾರ ಕೊಡುವುದರ ಬದಲು, ಯಾವರೀತಿ ನಿಯಂತ್ರಣ ಇಡಲಿಕ್ಕೆ ಹೊರಟಿದ್ದೇವೆ ಎಂದರೆ, ಆಡಿಟ್ ಶುಲ್ಕದ

ಮೂಲಕ ಸುಮಾರು 19 ಕೋಟಿ ರೂ. ಸಂಗ್ರಹ ಮಾಡುತ್ತಿದ್ದೇವೆ. ಆಡಿಟ್ ವೆಚ್ಚವೆಂದು 3 ಕೋಟಿ ರೂ. ಒಟ್ಟು ಸುಮಾರು 22 ಕೋಟಿ ರೂಪಾಯಿ ರಾಜ್ಯಾದ್ಯಂತ ಇರುವಂಥ ಕೋ–ಆಪರೇಟಿವ್ ಬ್ಯಾಂಕುಗಳಿಂದ ಸಂಗ್ರಹ ಮಾಡುತ್ತಿದ್ದೇವೆ. ದಕ್ಷಿಣ ಕನ್ನಡದಲ್ಲಿ ಒಂದೇ ಕಡೆಯಿಂದ ಸುಮಾರು 1 ಕೋಟಿ 27 ಲಕ್ಷ ರೂಪಾಯಿಗಳು ಕಳೆದ ವರ್ಷ ಸಂಗ್ರಹವಾಗಿದೆ. 4 ಲಕ್ಷ, 5 ಲಕ್ಷ, ಟರ್ನ್ ಓವರ್ ಮೇಲೆ ಹಾಕಿರುವಂಥ ಈ ಆಡಿಟ್ ಶುಲ್ಕ ಮತ್ತು ವೆಚ್ಚ ಯಾವುದಿದೆ, ಇದು ಬಹಳ ಭಾರವಾಗಿರುತ್ತೆ. ಅವರಿಗೆ ಬರುವಂಥ ಲಾಭಾಂಶಗಳು ಕಡಿಮೆ. ಅದರ ಮೇಲೆ ಈ ರೀತಿ ಹಾಕಿರುವುದರ ಮೂಲಕ ತುಂಬಾ ಕಷ್ಟದಲ್ಲಿ ನಡೆಯುತ್ತಿರುವಂಥ ಈ ಕೋ–ಆಪರೇಟಿವ್ ಬ್ಯಾಂಕುಗಳು ನಡೆಯುತ್ತಾ ಇವೆ, ಈ ಹಿನ್ನೆಲೆಯಲ್ಲಿ ತಾವು ನಿಯಂತ್ರಣವನ್ನು ಬೇಕಾದರೆ ಬೇರೆ ರೀತಿಯಲ್ಲಿ ಇಡಬಹುದು. ಆದರೆ, ಈ ರೀತಿ ವೆಚ್ಚ ಹಾಕಿಕೊಂಡು, ಪರೋಕ್ಷವಾಗಿ ಒಂದುರೀತಿ ಸುಲಿಗೆ ಮಾಡತಕ್ಕಂಥಾದ್ದು ಸರಿಯಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಇದರ ಬಗ್ಗೆ ಕೂಡ ತಾವು ಸೌಹಾರ್ಧವಾಗಿ, ಯಾವರೀತಿ ಅದನ್ನು ರೆಡ್ಯೂಸ್ ಮಾಡುತ್ತೀರಿ, ನಿಯಂತ್ರಣವನ್ನು ಬೇರೆ ರೀತಿಯಲ್ಲಿ ಹೇಗೆ ಇಡುತ್ತೀರಿ ಎಂದು ಹೇಳುವುದರ ಬಗ್ಗೆ ಕೂಡ ಮಾಹಿತಿಯನ್ನು ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಗೌರವಾನ್ವಿತ ಸದಸ್ಯರು ಏನು ಸರ್ಕಾರದ ಹಸ್ತಕ್ಷೇಪದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. 'ಸೌಹಾರ್ಧ' ಕಾಯಿದೆ ಮಾಡಿದ್ದು ಮುಖ್ಯವಾಗಿ ಅಟಾನಮಿ ಕೊಡಲಿಕ್ಕೆ. ಹಾಗಾಗಿ, ಹಸ್ತಕ್ಷೇಪ ಮಾಡುವ ಪ್ರಶ್ನೆಯೇ ಇಲ್ಲ. ನಮ್ಮ ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್ ಇದೆಯಲ್ಲಾ, ಆ ಆಕ್ಟ್‌ನಲ್ಲಿ ಕೋ–ಆಪರೇಟಿವ್ ಸೊಸೈಟಿ ಎಂಬ ಶಬ್ದ ಅದು. ಹಾಗಾಗಿ, ನಾವು ತಿದ್ದುಪಡಿ ಮಾಡುವ ಅವಶ್ಯಕತೆ ಏಕೆ ಬಂತೆಂದರೆ, ಆರ್.ಬಿ.ಐ. ಏನು ಹೇಳಿದೆಯೆಂದರೆ, ಅರ್ಬನ್ ಬ್ಯಾಂಕುಗಳೇನಿವೆ, ಅವರಿಗೆ ಸೌಹಾರ್ಧ ಕಾಯಿದೆಯಲ್ಲಿ ಕನ್‌ವರ್ಟ್ ಮಾಡಬೇಕಾದರೆ, ಅದು ಕೋ–ಆಪರೇಟಿವ್ ಸೊಸೈಟಿ ಎಂಬ ಶಬ್ದ ಇರಬೇಕು. ಇಲ್ಲವೆಂದರೆ, ನಮ್ಮ ಆಕ್ಟ್ ಕಾಂಟ್ರಿರಿ ಆಗುತ್ತದೆ, ನಮಗೆ ಅವರು ಸಹಾಯ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ, ಸರ್ಕಾರದ ಹಸ್ತಕ್ಷೇಪದ ಪ್ರಶ್ನೆಯೇ ಇಲ್ಲ. ಈ ಕಾಯಿದೆಗೆ ರಾಷ್ಟ್ರಪತಿಯವರ ಅನುಮೋದನೆ ಸಿಕ್ಕಿದೆ. ಒಂದೆರಡು ಬಾರಿ ತಾವು ಹೇಳಿದ ಹಾಗೆ ತಿದ್ದುಪಡಿಯಾಗಿದೆ. ಈಗ ತಾವು

ಡಿಸ್‌ಕ್ವಾಲಿಫೈ ಬಗ್ಗೆ ಹೇಳಿದಿರಿ. ಈಗ ಸೌಹಾರ್ದ ಕಾಯ್ದೆಯ ಪ್ರಕಾರ ಡಿಸ್‌ಕ್ವಾಲಿಫೈ ಮಾಡಿದರೆ ಅಪೀಲೆ ಇಲ್ಲ. ಯಾರೂ ಹೋಗುವಂತೆ ಇಲ್ಲ. ನಾನೇ ಮಂತ್ರಿಯಾಗಿ ನಾನು ಡಿಸ್‌ಕ್ವಾಲಿಫೈ ಮಾಡಿದರೆ ನನ್ನ ಮೇಲೆ ಹೈಕೋರ್ಟ್ ಇದೆ. ಮತ್ತೊಂದು ಇದೆ, ಆದರೆ ಇವರ ಮೇಲೆ ಯಾರಿದ್ದಾರೆ? ಯಾರೂ ಇಲ್ಲ. ಹಾಗಾಗಿ ಇದಕ್ಕೆ ಏನುಮಾಡಿದ್ದೇವೆಂದರೆ, ರಿಜಿಸ್ಟ್ರಾರ್ ಡಿಸ್‌ಕ್ವಾಲಿಫಿಕೇಷನ್ ಮಾಡಿದಾಗ ನ್ಯಾಯ ಕೊಡಲು ಒಂದು ಅಪೀಲ್ ಇರಬೇಕೆಂಬ ವ್ಯವಸ್ಥೆ ಮಾಡಿದರೆ ಇಂಟರ್‌ಫಿಯರೆನ್ಸರ ಮಾಡುವ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಕೋರ್ಟ್‌ಗೆ ಹೋಗಲಿ. ನಿಮ್ಮ ರಿಜಿಸ್ಟ್ರಾರ್ ಮುಂದೆ ಏಕೆ ಬರಬೇಕು? If the disqualification is unusual or illegal let him approach the court. ಕೋರ್ಟ್‌ಗೆ ಹೋಗಲಿಕ್ಕೆ ಪ್ರಾವಿಷನ್ ಮಾಡಿ Why are you taking that to the Registrar?

ಶ್ರೀ ಆರ್.ವಿ. ದೇಶಪಾಂಡೆ : ಅವರು ಪುನ: ಹೋಗಬಹುದಲ್ಲಾ? Writ jurisdiction ಇದೆಯೆಲ್ಲಾ inherent jurisidiction ಇದೆ Anybody can go. ಅದು ಕಾಯ್ದೆಯಲ್ಲಿ ನಾನು ಹೇಳಬೇಕಾದ್ದಿಲ್ಲ. ಹಾಗಾಗಿ ಯಾರಿಗಾದರೂ ತೊಂದರೆಯಾದಾಗ ಒಂದು ಅಪೀಲ್‌ಗೆ ಅವಕಾಶ ಇರಬೇಕೆಂದು ಮಾಡಿದ್ದೇವೆಯೇ ವಿನಹ ಬೇರೆ ಯಾವ ಉದ್ದೇಶದಿಂದ ಮಾಡಿಲ್ಲ. ಸರ್ಕಾರದ ಸೌಹಾರ್ದ ಕಾಯ್ದೆಯಲ್ಲಿ ಇಂಟರ್‌ಫಿಯರ್ ಮಾಡುವ ಮನಸ್ಸಿಲ್ಲ. ಅವಶ್ಯಕತೆಯೂ ಇಲ್ಲ. ಅಷ್ಟೆ ಅಲ್ಲ. ವೈದ್ಯನಾಥನ್ ಕಮಿಟಿಯವರು ಒಂದು ರಿಪೋರ್ಟ್ ಕಳಿಸಿದ್ದಾರೆ. ಕೋ–ಆಪರೇಟಿವ್ಸ್‌ಗೆ ಅಟಾನಮಿ ಕೊಡಿ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಹಸ್ತಕ್ಷೇಪವಿರಬಾರದು, ಆದರೆ ಅದು ಏನಾಗುತ್ತದೆ ಎಂಬ ಬಗ್ಗೆ ತಾವು ವಿಚಾರ ಮಾಡಿ, ಗೌರ್ನಮೆಂಟ್ ಗ್ಯಾರೆಂಟೀಸ್ ಕೊಡುತ್ತೇವೆ. ಗೌರ್ನಮೆಂಟ್‌ನಿಂದ ಶೇರ್ ಕ್ಯಾಪಿಟಲ್ ಕೊಡುತ್ತೇವೆ. ಹಾಗೆ ವೈದ್ಯನಾಥನ್ ಕಮಿಟಿಯವರು ಹೇಳಿದ್ದಾರೆ. ತಾವು ಒಪ್ಪಿಕೊಂಡರೆ ಸೆಂಟ್ರಲ್ ಗೌರ್ನಮೆಂಟ್ ಎಲ್ಲಾ ಶೇರ್ ಕ್ಯಾಪಿಟಲ್ ವಾಪಸ್ ಕೊಡುತ್ತೇವೆಂದು ಹೇಳಿದ್ದಾರೆ. ಗೌರ್ನಮೆಂಟ್ ಅದಕ್ಕೆ ಗ್ಯಾರಂಟಿ ಇದ್ದಾಗ ಕಾಮನ್ ಸೂಪರ್‌ವಿಜನ್ ಬೇಕಿರಲಿಲ್ಲ. ಹಾಗಾಗಿ ನಾವು ಒಪ್ಪಿಕೊಳ್ಳುತ್ತೇವೆ, ಸರ್ಕಾರ ಸಹ ಆ ದಿಕ್ಕಿನಲ್ಲಿ ಕೆಲಸ ಮಾಡುತ್ತದೆ. ಆಡಿಟ್ ಡಿಪಾರ್ಟ್‌ಮೆಂಟ್ ಸಹ ಹೇಳಿದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಚಾರ್ಟರ್ಡ್ ಅಕೌಂಟೆಂಟ್‌ಗಳು ಆಡಿಟ್ ಮಾಡಬೇಕು. ಇಲ್ಲಿಯೂ ಆಡಿಟ್ ಮಾಡಬೇಕು.

ಹಾಗಾಗಿ ಆಡಿಟ್ ಫೀಯನ್ನೂ ಕಡಿಮೆ ಮಾಡಲು ಹೇಳಿದ್ದೇನೆ. ಮತ್ತು ಡಿಪಾರ್ಟಮೆಂಟ್‌ನಲ್ಲಿ ಯಾವ ಪ್ರಕಾರ ಆಡಿಟ್ ಮಾಡುವುದು ಯಾವ ಪ್ರಕಾರದಲ್ಲಿ ರೀಸ್ಟ್ರಕ್ಚರ್ ಮಾಡಲು ಸಾಧ್ಯ ಎಂಬ ಬಗ್ಗೆಯೂ ಚಿಂತನೆ ನಡೆಯುತ್ತಿದೆ. ಏಕೆಂದರೆ ಚಾರ್ಟರ್ಡ್ ಅಕೌಂಟೆಂಟ್ಸ್ ಇದ್ದಾಗ ಆಡಿಟ್ ಡಿಪಾರ್ಟಮೆಂಟ್‌ನ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಬರುತ್ತದೆ. ಇದ್ದರೆ ಯಾವ ರೀತಿಯಾಗಿ ಕೆಲಸ ಮಾಡಬೇಕು, ಫೀ ಎಷ್ಟು ಇರಬೇಕು, ಆ ಭಾರ ಸಹಕಾರ ಸಂಘಕ್ಕೆ ಆಗಬಾರದು. ಅದರ ಬಗ್ಗೆ ಸಹ ನಾವು ಚಿಂತನೆ ಮಾಡುತ್ತಿದ್ದೇವೆ. ಈಗ ಕೋ-ಆಪರೇಟಿವ್ಸ್ ಆಡಿಟ್‌ಗೆ ಫೀಯನ್ನೇನು ಪ್ರಿಸ್ಕ್ರೈಬ್ ಮಾಡಿದ್ದೇವೆ ಅದನ್ನು ಕಡಿಮೆ ಮಾಡಲು ಪ್ರಸ್ತಾವನೆಯನ್ನು ಈಗಾಗಲೇ ಎಫ್.ಡಿ. ಯವರಿಗೆ ಕಳಿಸಿದ್ದೇವೆ. ಇಲ್ಲಿ ಯಾವುದೇ ಹಸ್ತಕ್ಷೇಪ ಮಾಡುವುದು, ಇಂಟರ್‌ಫಿಯರ್ ಮಾಡುವುದು ಯಾವುದೇ ಅವಶ್ಯಕತೆ ಇಲ್ಲ. ಹಾಗಾಗಿ ಆರ್.ಬಿ.ಐ.ನವರು ನಮಗೆ ಪತ್ರವನ್ನು ಬರೆದರು. 17 December 2004 ಆ ಪ್ರಕಾರ ನಾವು ಈ ಅಮೆಂಡ್‌ಮೆಂಟ್ ತಂದಿದ್ದೇವೆ, ಅದಕ್ಕೆ ತಾವು ಒಪ್ಪಿಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಸೌಹಾರ್ದ ಕಾಯ್ದೆ ಬಗ್ಗೆ ಅವರು ಹೇಳಿದ್ದಾರೆ. ಆವತ್ತೇ ಇದೆಲ್ಲಾ ಚರ್ಚೆಯಾಗಿದೆ. ಆಡಿಟ್ ಆಗಬೇಕು, ಚಾರ್ಟರ್ಡ್ ಅಕೌಂಟೆಂಟ್ ಆಡಿಟ್ ಮಾಡಬೇಕು. 2ಏ ಪ್ರಾವಿಜನ್ ಆಡಿಟ್‌ರನ್ನು ತೆಗೆದುಹಾಕಿ ಅವರನ್ನು ರಿಜಿಸ್ಟ್ರಾರ್ ಕೆಳಗೆ ತರಬೇಕು ಎಂದ ದಿವಸವೇ ನಾವು ಇಲ್ಲಿ ಬೇಕಾದಷ್ಟು ಚರ್ಚೆ ಮಾಡಿದ್ದೇವೆ. ಅದನ್ನೆಲ್ಲಾ ಈಗ ತಿಳಿಸಿಯಾಗಿದೆ Director of Audits ಗೆ ನಾವು ಅಧಿಕಾರಿ ಕೊಟ್ಟಾಗಿದೆ, through Auditor ನಾವು ಸೊಸೈಟಿಗಳನ್ನು ಹೇಗೆ ಬೇಕೋ ಹಾಗೆ ಮಾಡುವ ಸ್ಥಿತಿ ನಿರ್ಮಾಣವಾಗಿದೆ, ಇಲ್ಲಿ ನಾವು ಕೇಳುವುದು ಒಂದು impeachment ಆಗಿತ್ತು, ಅನರ್ಹತೆಯನ್ನು ನಾವು ಯಾರನ್ನೋ ಮಾಡಿದ್ದೆವು, ಅವರು ಕೋರ್ಟ್‌ಗೆ ಹೋಗಲಿ. Why are you bringing an appeal before Registrar of Karnataka ಎಂಬುದು ನಮಗೆ ಅರ್ಥವಾಗುವುದಿಲ್ಲ. ರಿಜಿಸ್ಟ್ರಾರ್ ಆಫ್ ಕರ್ನಾಟಕದ ಮುಂದೆ ಬಂದ ತಕ್ಷಣ ಅದು ನಿಮ್ಮ ಮುಂದೆ ಬಂದಂತೆ ಎಂದು ನಮ್ಮ ಭಾವನೆ, ವಿರೋಧಪಕ್ಷದಲ್ಲಿ ಕುಳಿತುಕೊಂಡು, ಈ ರಾಜ್ಯದ ರಿಜಿಸ್ಟ್ರಾರ್ ಇಂಡಿಪೆಂಡೆಂಟ್ ಬಾಡಿಯಲ್ಲವಲ್ಲ? ನೀವು ಮಾಡಲಿಲ್ಲವಲ್ಲ? ನೀವು ಮಾಡಬೇಕಾಗಿತ್ತು. ಬೇರೆ ರಾಜ್ಯಗಳಲ್ಲಿ

ಅರ್ಧನಾರೇಶ್ವರನ್ ಕಮಿಟಿಯಲ್ಲಿ ಹೇಳಿರುವುದು, ವೈದ್ಯನಾಥನ್ ಕಮಿಟಿಯಲ್ಲಿ ಹೇಳಿರುವುದು, ನಿಮ್ಮ ಜಯರಾಜ್ ಕಮಿಟಿಯಲ್ಲಿ ಹೇಳಿರುವುದು ಎಲ್ಲಾ ಕಾಯ್ದೆಗಳಲ್ಲೂ ನಾವು ವ್ಯಾಪಕವಾಗಿ ಮಾತನಾಡಿದ್ದೇವೆ. ಸರ್ಕಾರ ಇಂಟರ್‌ಫಿಯರ್ ಆಗಬಾರದು, ಅವರ ವ್ಯವಹಾರವನ್ನು ಅವರು ಮಾಡಿಕೊಂಡು ಹೋಗಲು ಬಿಡಬೇಕು. This is a co-operative organisation. ಅವರಿಗೆ ಎಲ್ಲಿ ಬಿಟ್ಟಿದ್ದೇವೆ? ಐವತ್ತು ರೂಪಾಯಿ ಶೇರು ಕೊಟ್ಟು ಬಿಟ್ಟರೆ ನಾನು ಮೂರು ಜನ ಡೈರೆಕ್ಟರ್‌ರನ್ನು ಮಾಡುತ್ತೇವೆಂದು ಡೈರೆಕ್ಟರನ್ನು ಮಾಡುವುದು, ಅಲ್ಲಿ ಯಾರೋ ಎಲೆಕ್ಟೆಡ್ ಬಾಡಿಗಳನ್ನೆಲ್ಲಾ ಕೆಲಸ ಮಾಡದಂತೆ ಮಾಡಿ ತಮಗೆ ಬೇಕಾದವರನ್ನು ಅಧ್ಯಕ್ಷರನ್ನು ಮಾಡುವುದು, ಈ ಸ್ಥಿತಿ ನಿರ್ಮಾಣವಾಗಿದೆ ತಾವೇ ಮಾಡಿಬಿಟ್ಟಿರಿ. ಹೋದ ವರ್ಷ 75 ಪರ್ಸೆಂಟ್ ರೆಕವರಿಯಾದವರು eligible to vote.. ಎಂದು ಇದ್ದದ್ದು ಈ ವರ್ಷ 30 ಪರ್ಸೆಂಟ್ are eligible to vote ಎಂದು ಹೇಳುತ್ತೀರಿ political reason ಗೆ ತಾವು ಮಾಡುತ್ತೀರಿ, ಕಾರಣ ಬೇರೆ ಕೊಡುತ್ತೀರಿ, ಬರ ಬಂದುಬಿಟ್ಟಿತ್ತು 30 ಪರ್ಸೆಂಟ್ ಮಾಡಿದೆವು ಎನ್ನುತ್ತೀರಿ, ಪೂರಾ ಇಳಿಸಿಬಿಡಬೇಕಾಗಿತ್ತು. hundred percent ಮಾಡಬೇಕಾಗಿತ್ತು. Your vote is nothing to do with the default of the society ಎಂದು ನೀವು ಹೇಳಲಿಲ್ಲ. 30 ಪರ್ಸೆಂಟ್‌ಗೆ ಏಕೆ ಇಳಿಸಿದಿರಿ? ನಾವು ಕೇಳಲಿಲ್ಲವೆಂದರೆ ತಾವು ಮಾಡಿದ್ದೆಲ್ಲಾ ಸರಿಯೆಂದು ಅಲ್ಲ. ತಾವು ರಾಜಕೀಯ ಡಿಸಿಷನ್ಸ್‌ಗಳನ್ನು ತೆಗೆದುಕೊಂಡಿದ್ದೀರಿ, ಇದುವರೆಗೆ ಸೊಸೈಟಿಯವರು 75 ಪರ್ಸೆಂಟ್ ರಿಕವರಿ ಇರುವವರು ಓಟನ್ನು ಹಾಕಬೇಕೆಂದು ಇದ್ದದನ್ನು ದಿಢೀರ್ ಎಂದು ಒಂದು ಅಡ್ಮಿನಿಸ್ಟ್ರೇಟಿವ್ ಆರ್ಡರ್‌ನ್ನು ಪಾಸ್ ಮಾಡಿ 30 ಪರ್ಸೆಂಟ್‌ಗೆ ಇಳಿಸಿಬಿಟ್ಟಿರಿ whoever was thinking ಇಷ್ಟೇ ಸೊಸೈಟಿ ಬರುತ್ತದೆಂದು ಯೋಚನೆ ಮಾಡುತ್ತಿದ್ದವರು ಇವರು ಒಂದು ಡಿಸಿಷನ್ ತೆಗೆದುಕೊಂಡ ತಕ್ಷಣ 15–20 ಸೊಸೈಟಿ ಒಂದೊಂದು ತಾಲ್ಲೂಕಿಗೆ ಜಾಸ್ತಿಯಾಗಿ, ರಿಜಿಸ್ಟ್ರಾರ್ ಕೆಳಗೆ ನೀವೇನು ಅಪೀಲನ್ನು ಇಟ್ಟುಕೊಂಡಿದ್ದೀರಿ ಅಕಸ್ಮಾತ್ ಯಾರೋ ಒಬ್ಬರನ್ನು ಅನರ್ಹರನ್ನಾಗಿ ಮಾಡಬೇಕಾಗಿದ್ದವರನ್ನು ನೀವು ಉಳಿಸುತ್ತೀರಿ, ನ್ಯಾಯ ಸಿಗುವ ಕಡೆ ನಿಧಾನವಾಗುತ್ತದೆ, ಅವರ ಟರ್ಮ್ ಮುಗಿದು ಹೋಗುತ್ತದೆ, ಅವನು ನಿಜವಾಗಿ ಅರ್ಹನಿದ್ದು ಅನರ್ಹತೆಗೆ ಒಳಪಟ್ಟಿದ್ದರೆ ಕೋರ್ಟ್‌ಗೆ ಹೋಗಲಿ,Let him seek natural justice in the court of law why are you controlling those

bodies? why are you changing the decision of the Boards which disqualify a Board of Director on their own? ಅವರು ಕಮಿಟಿಯಲ್ಲಿ ಇಟ್ಟರುತ್ತಾರೆ, ದುಡ್ಡು ಅವರದ್ದು. ವ್ಯವಹಾರ ಅವರದ್ದು. ಹಣ ಅವರದ್ದು, ಯಾರನ್ನೋ ತಗೆದು ಹಾಕುತ್ತೇವೆಂದು ಅವರು reason ಕೊಟ್ಟು ಮಾಡಿದಾಗ he has every right to approach the court, need not appeal before the Registrar of Karnataka. ತಾವು ತೆಗೆದು ಹಾಕಿಬಿಡಿ, ಕೋರ್ಟ್‌ಮುಂದೆ ಹೋಗಿ ಎಂದು ಹೇಳಿ, ನೀವೇಕೆ ರಿಜಿಸ್ಟ್ರಾರ್ ಕಂಟ್ರೋಲ್‌ಗೆ ತೆಗೆದುಕೊಳ್ಳುತ್ತೀರಿ? ಎರಡನೇಯದು, ನಿಜ, parallel structure ಇದು ರಿಜಿಸ್ಟ್ರಾರ್ ಆಗಿದ್ದ ದಿವಸವೇ ನಾವು ಮಾತನಾಡಿದ್ದು. ನಿಮ್ಮ ಅರ್ಬನ್ ಬ್ಯಾಂಕ್ಸ್‌ಗೆ, ಕೋ-ಆಪರೇಟಿವ್ ಅರ್ಬನ್ ಬ್ಯಾಂಕ್ಸ್‌ಗೆ ವಿರುದ್ಧ ದಿಕ್ಕಿನಲ್ಲಿ ಸೌಹರ್ದ ಬ್ಯಾಂಕ್‌ಗಳು ಆರಂಭವಾಗುತ್ತವೆ, ತಮ್ಮ ಹತ್ತಿರ ಇದರ ಬಗ್ಗೆ ಮಾತನಾಡಿದೆವು, ಆದರೆ ತಾವು ಆವತ್ತು ನಮ್ಮ ಮಾತನ್ನು ಕೇಳಲಿಲ್ಲ. ಪ್ಯಾರಲಲ್ ಆಗಿ ಇವತ್ತು ಆಗುತ್ತದೆ, ಕಂಟ್ರೋಲ್ ಹೋಗುತ್ತದೆ, ಎಂದು ಹೇಳಿದೆವು ಆವತ್ತು ದೊಡ್ಡ ವಿಕೇಂದ್ರಿಕೃತ ವ್ಯವಸ್ಥೆ ಸ್ವಾಯತ್ತತೆ ಈ ಭಾಷಣಗಳನ್ನೆಲ್ಲಾ ತಾವು ಮಾಡಿ ಜೆಸ್ಟ್ ten years ನಲ್ಲಿ ವಾಪಸ್ ಬಂದು ಆರ್.ಬಿ.ಐ. direction ಇದೆ they will not be regulated under Reserve Bank Act ಎಂದು ಹೇಳಿಬಿಟ್ಟರೆ ಸೌಹಾರ್ದ ಸಂಘ ಎನ್ನುವುದಕ್ಕೆ ಹೆಸರೇನು ಉಳಿಯುತ್ತದೆ? If you control a society through RBI ಅನಂತರ ನಬಾರ್ಡ್‌ದ್ದು ದೊಡ್ಡ ಕತೆ, ಭಾನುಪ್ರತಾಪ್ ಸಿಂಗ್‌ರವರು ಮಾಡಿದ್ದ ದಿವಸ ದೊಡ್ಡ ಉದ್ದೇಶವನ್ನಿಟ್ಟುಕೊಂಡು ಮಾಡಿದ್ದರು, ರೈತರಿಗೆ ಏನಾದರೂ ಸಾಲ ಸಿಕ್ಕಲಿ, ಬೇಗ ಸಿಕ್ಕಲಿ, ರಿಜರ್ವ್ ಬ್ಯಾಂಕ್‌ನ ಎಲ್ಲಾ ನಿಯಮಗಳನ್ನು ಸಡಿಲಮಾಡಿಕೊಳ್ಳಲಿ ಎಂದು, ನಿಮ್ಮ ನಬಾರ್ಡ್ ರಿಜವ್ ಬ್ಯಾಂಕ್‌ನ ಎರಡರಷ್ಟು ಕಿರುಕುಳ ನಮಗೆ ಇವತ್ತು ಕೊಟ್ಟಿದೆ. ರಾಜ್ಯ ಸರ್ಕಾರ ಸಬ್ಸಿಡಿ ವಜಾ ಮಾಡಬೇಕೆಂದು ಬೊಮ್ಮಾಯಿಯವರು ತೀರ್ಮಾನಮಾಡಿ ತೆಗೆದುಕೊಂಡು ಹೋದಾಗ ನಬಾರ್ಡ್ ಬೇಡ ಎಂದಿದೆ,It has come against the decision of the state. ನನಗೆ ಗೊತ್ತು ನಾವು ಈ ವರ್ಷದ ಸಾಲವನ್ನೋ ಸುಸ್ತಿ ಬಡ್ಡಿಯನ್ನೋ ಅಥವಾ ಬಡ್ಡಿಯನ್ನೋ ಮನ್ನಾ ಮಾಡುತ್ತೇವೆಂದಾಗ your NABARD objected. Further refinance ಮಾಡುವುದಿಲ್ಲವೆಂದು ಅಂದಿದೆ, ಇವೆಲ್ಲಾ ನಮಗೆ ಸಹಾಯ ಮಾಡುವುದಕ್ಕೆ ಇದ್ದಾವೆಯೇ? ರೈತರ ಅನುಕೂಲಕ್ಕೆ

ಇವು ಇದ್ದಾವೆಯೇ? ಇವರು ಹೇಳಿದ್ದನ್ನೇ ಕೇಳಿಕೊಂಡು ಸರ್ಕಾರ ಏತಕ್ಕೆ ನಡೆಸುತ್ತೀರಿ ಎಂಬುದು ನಮಗೆ ಅರ್ಥವಾಗುವುದಿಲ್ಲ. ತಾವು ಯೋಚನೆ ಮಾಡಿ, Yes, disqualify ಆಗುವವರಿಗೆ natural justice ಕೆಳಗೆ appeal ಹಾಕುವುದಕ್ಕೆ ಅವಕಾಶ ಬೇಕು, let him approach the court. Don't squeeze the society through registrar.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿದ್ದಾರೆ Karnataka Souhardha Act 1997 was amended covering the specific suggestion of the Reserve Bank of India. The Reserve Bank of India has given some suggestions to amend the Act. What are the specific suggestions or new suggestions which the Reserve Bank of India have given? ತಾವು ಕೊಟ್ಟರೆ ನಮಗೂ ಕ್ಲಾರಿಫಿಕೇಷನ್ ಆಗುತ್ತದೆ, ಇಂಥದ್ದರಲ್ಲಿ ಇದನ್ನು ಮಾಡಿದ್ದಾರೆ, ಇದರಿಂದ ಜನರಿಗೆ ಅನುಕೂಲವಾಗುತ್ತದೆ, You have not given. Specific suggestions ಇದ್ದರೆ ಕಂಪೇರ್ ಮಾಡಿಕೊಂಡರೆ ಇದು ಅನುಕೂಲವಾಗುತ್ತದೋ ಇಲ್ಲವೋ ಎಂಬುದು ನಮಗೆ ಗೊತ್ತಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಒಂದೇ ಒಂದು ವಿಚಾರವನ್ನು ನಾನು ಹೇಳಲು ಬಯಸುವುದೇನೆಂದರೆ, ಒಂದು, ಆ ರಿಸರ್ವ್ ಬ್ಯಾಂಕ್‌ನ ಗೈಡ್ ಲೈನ್ಸ್ ಏನಿದೆ ಎನ್ನುವಂಥದನ್ನು ನಮಗೂ ಸ್ವಲ್ಪ ಹೇಳಬೇಕು. ಡಿಸೆಂಬರ್‌ನಲ್ಲಿ ಅದನ್ನು ತಿಳಿಸಿದ್ದಾರೆಂದು ಅವರು ಹೇಳಿದರು. ಆದರೆ, ನಮ್ಮ ಮಾಹಿತಿಗೋಸ್ಕರವಾಗಿ ತಿಳಿದುಕೊಳ್ಳಲು ಬಯಸುತ್ತಿದ್ದೇನೆ. ಅದನ್ನು ಮಾನ್ಯ ಸಚಿವರು ಕಳಿಸಿಕೊಟ್ಟರೆ ಒಳ್ಳೆಯದು. ಅದರ ಜೊತೆಯಲ್ಲಿ, ನಾನು ಬಹಳ ಕಳಕಳಿಯಿಂದ ಹೇಳುತ್ತೇನೆ, ನಮ್ಮ ಉತ್ತರ ಕನ್ನಡ ಜಿಲ್ಲೆಯವರು ಇವತ್ತು ಸಹಕಾರಿ ಸಚಿವರಾಗಿದ್ದಾರೆ, ಉತ್ತರ ಕನ್ನಡ ಜಿಲ್ಲೆ ಸಹಕಾರಿ ಕ್ಷೇತ್ರದಲ್ಲಿ ಅನೇಕ ಜಿಲ್ಲೆಗಳಂತೆ ಮಾದರಿಯಾಗಿ ಮುಂದಿರುವಂಥ ಜಿಲ್ಲೆ, ಹಾಗಾಗಿ ಈಗ ಏನು ಸೌಹಾರ್ದ ಕಾಯ್ದೆ ಇದೆ ಅದು ತನ್ನ ಪಾವಿತ್ರತೆಯನ್ನು ಉಳಿಸಿಕೊಳ್ಳುವ ಈ ಹಿಂದೆ ಕೆಲವು ಏನು ಹಸ್ತಕ್ಷೇಪವಾಗುವಂಥ ತಿದ್ದುಪಡಿಗಳಾಗಿದೆಯೊ, ತಾವು ಅದರಲ್ಲಿ ಭಾಗಿಗಳಲ್ಲ. ಆದರೆ ಹಿಂದಿನ ಸರ್ಕಾರದಲ್ಲಿ ಏನು ಆಗಿದೆಯೊ ಅದರಲ್ಲಿ ಮಾರ್ಪಾಟು ಮಾಡಿ ಇನ್ನಷ್ಟು ಜನ ಸೌಹಾರ್ದಕ್ಕೆ ಹೋಗುವುದಕ್ಕೆ

ಬೇಕಾಗಿರುವಂಥ ಪ್ರೋತ್ಸಾಹದಾಯಕವಾದಂಥ ವಾತಾವರಣ ಸಹಕಾರಿ ಕ್ಷೇತ್ರದಲ್ಲಾದರೆ ಸಹಕಾರಿ ಶತಮಾನೋತ್ಸವದ ವರ್ಷ, ಇಂಥ ಒಂದು ವರ್ಷದಲ್ಲಿ ನಾವು ಸಹಕಾರಿ ಕ್ಷೇತ್ರದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಸಂದೇಶವೇ ಪ್ರಮುಖವಾಗಿ ಹೋಗುತ್ತಿದ್ದರೆ ಅನೇಕ ಸಹಕಾರಿ ಸಂಘಗಳು ಬಹಳ ಉತ್ತಮವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಅಲ್ಲೂ ನ್ಯೂನತೆಗಳು ಇದೆ, ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಿ, ಆದರೆ, ಇನ್ನಷ್ಟು ಜನ ಸೌಹಾರ್ದಕ್ಕೆ ಹೋಗುವ ರೀತಿಯಲ್ಲಿ ಪ್ರೋತ್ಸಾಹದಾಯಕವಾದಂಥ ವಾತಾವರಣ ನಿರ್ಮಾಣವಾಗುವಂಥ ಸಂದೇಶ ಮಾನ್ಯ ಸಚಿವರಿಂದ ಈ ಸಂದರ್ಭದಲ್ಲಿ ಹೋಗಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಸರ್ಕಾರ ಪಾರದರ್ಶಕತೆ, ವಿಕೇಂದ್ರೀಕರಣ ಈ ವಿಚಾರದಲ್ಲಿ ವಿಶ್ವಾಸವಿಟ್ಟಿದೆ. ಹಾಗಾಗಿ ಸೌಹಾರ್ದ ಕಾಯ್ದೆಗೆ ಇನ್ನೂ ಪಾರದರ್ಶಕತೆ ಮಾಡುವುದಕ್ಕೆ ತಮ್ಮ ಸಲಹೆ ಇದ್ದರೆ ಅದನ್ನು ಖಂಡಿತವಾಗಿ ಕೊಡಿ. ಸರ್ಕಾರ ಗಂಭೀರವಾಗಿ ಆಲೋಚನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಲು ಸಿದ್ಧವಿದೆ. ಕೋ-ಆಪರೇಟಿವ್ ಆಡಿಟ್‌ನ ಬಗ್ಗೆ ಆಡಿಟ್ ಫೀ ಬಗ್ಗೆ ಕೇಳಿದ್ದಾರೆ ಎಂದು ಹೇಳಿದೆ. ಸೌಹಾರ್ದ ಆಕ್ಟ್ ಕೆಳಗೆ ಆಡಿಟ್ ಕೆಳಗೆ ಆಡಿಟ್ ಆಗುವುದು ಚಾರ್ಟರ್ಡ್ ಅಕೌಂಟ್ಸ್‌ನಿಂದ ನಮ್ಮ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ನಿಂದ ಅಲ್ಲ, ಎರಡನೇಯದು just I will read the letter. Banking Regulation Act 1949, Karnataka souhardha Sahakari Act amendments, Reserve Bank of India. please refer to the letters so and so under the captioned subject. In this connection, we advise you that the request for conversion of sri Subramanyeshwara Cooperative Bank Limited and Koteshwara Sahakari Bank Niyamitha will only be considered after the Karnataka Souhardha Sahakara Act is suitably amended. ಈಗ ನಾವು ಅರ್ಬನ್ ಬ್ಯಾಂಕ್ಸ್ ಅನ್ನು ಕನ್ವರ್ಟ್ ಮಾಡುತ್ತೇವೆಂದು ಹೇಳಿದಾಗ ಅವರು ಹೇಳುತ್ತಿದ್ದಾರೆ ನಮ್ಮ ಆರ್.ಬಿ.ಐ. ಬ್ಯಾಂಕಿಂಗ್ ವಿಚಾರದಲ್ಲಿ ಕೋ-ಆಪರೇಟಿವ್ ಸೊಸೈಟೀಸ್ ಎಂದು ಇದೆ. ಈ ಶಬ್ದವನ್ನು ನೀವು ಅನ್ವಯಿಸಿರಿ. ಹಾಗಾಗಿ ಇವತ್ತು ಈ ಇನ್ಸ್‌ಟಿಟ್ಯೂಷನ್ಸ್ ಕನ್ವರ್ಟೆಡ್ ಆಗಬೇಕಾಗಿದ್ದರೆ ಈ ಬಿಲ್ಲು ಪಾಸ್ ಆಗಬೇಕು. We have no other choice. ಹಾಗಾಗಿ ಇವತ್ತು ರಿಸರ್ವ್ ಬ್ಯಾಂಕ್ ಏನು ಟೆಕ್ನಿಕಲ್.....

Sri J.C.Madhuswamy : What prevents them in applying before the Reserve Bank and make it a Bank?
ರಿಸರ್ವ್‌ಬ್ಯಾಂಕ್, ಬ್ಯಾಂಕ್ ಮಾಡಬೇಡಿ ಎಂದು ಎಲ್ಲೂ ಹೇಳಲಿಲ್ಲವಲ್ಲಾ.

Sri R.V. Deshpande : According Banking Resolution Act,the word is 'co-operative society'

Sri J.C.Madhuswamy : Let it be sir, if they want to convert it as a Bank.....

Sri R.V. Deshpande : If they want to come under the R.B.I.,ಈಗ ಡಿಪಾಸಿಟ್ಸ್ ಇದೆಯಲ್ಲಾ ಅವನ್ನು ಕವರ್ ಮಾಡಲಾಗಿದೆ, ಅದರಲ್ಲಿ ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್ ಮತ್ತು ಆರ್.ಬಿ.ಐ. ಕಂಟ್ರೋಲ್ ಇಲ್ಲವೆಂದರೆ, depositors` interest will not be saved. ಆರ್.ಬಿ.ಐ. ಬೇಡ, ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್ ಬೇಡವೆಂದರೆ, the depositors`interest will be affected. Therefore, in the interest of the depositors, the guidelines have been issued by R.B.I. ಆ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ದಯಮಾಡಿ ಇದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪುತ್ತೇನೆ, ಸಂತೋಷ, ಏಕೆಂದರೆ, what is the definition for 'Banking'? ಬೇಸಿಕ್ ಪ್ರಶ್ನೆ ಅಲ್ಲಿ ಬರುತ್ತದೆ. Accepting public deposit is Banking. Giving loan is also definition for banking. If you are doing that, then you have to be controlled by some one. Then RBI interferes in it. ಮಾಧುಸ್ವಾಮಿಯವರೆ, ಬಿ.ಡಿ.ಪಿ. ಸೊಸೈಟೀಸ್ ಮಾಡಿದ್ದೇವೆಲ್ಲಾ ನಾವು ಆಗ ಬ್ಯಾಂಕಿಂಗ್ ಎನ್ನುವ ಡೆಫನೇಷನ್ ಅನ್ನು ಕೊಟ್ಟಾಗ ಅದನ್ನು ಆರ್.ಬಿ.ಐ.ನವರು ಅಕ್ಸೆಪ್ಟ್ ಮಾಡಲಿಲ್ಲ, ನೀವು ಸೊಸೈಟಿ ಎನ್ನುವ ವರ್ಡ್ ಅನ್ನಾದರೂ ತೆಗೆದುಹಾಕಿ, ಇಲ್ಲವೆಂದರೆ ಬ್ಯಾಂಕ್ ಎನ್ನುವ ವರ್ಡ್ ಹಾಕಿ ಎಂದರು. ಈಗೇನು ತಿದ್ದುಪಡಿಯನ್ನು ತಂದಿದ್ದಾರೆ ಅದು ಸೂಕ್ತವಾಗಿದೆ. 100 ಪರ್ಸೆಂಟ್ ನಾವೇ ಹೇಳುತ್ತೇವೆಲ್ಲಾ, ಇನ್ನೊಂದು ನೀವೇನು ಹೇಳಿದಿರಲ್ಲಾ ಅದನ್ನು ಒಪ್ಪುತ್ತೇನೆ. ರಿಜಿಸ್ಟ್ರಾರ್‌ಗೆ ಅಪೀಲ್ ಹೋಗತಕ್ಕಂಥದ್ದು ಬೇಡವೆನ್ನುವ ಮಾತೇನಿದೆ, ಅದಕ್ಕೆ ಬೇರೆ ಫೋರಂ ಕ್ರಿಯೇಟ್ ಮಾಡಬಹುದು, you can give magisterial power to that, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸೌಹಾರ್ದ ಆಕ್ಟ್ ಅನ್ನು ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಆಕ್ಟ್‌ನಿಂದ ಹೊರಗಿಡಬೇಕು ಎಂಬ ಉದ್ದೇಶದಿಂದ

ಅವರು ಸೌಹಾರ್ದ ಆಕ್ಟ್ ಅನ್ನು ತಂದಿದ್ದಾರೆ, ಪುನ: ನೀವು ಹೋಗಿ ಅವರ ಕಂಟ್ರೋಲ್‌ಗೆ ಕೊಡುವುದೇನೆಂದರೆ ಆ ಪರ್‌ವ್ಯೂ ಬಿಟ್ಟು ಬೇರೆ ಅಪೀಲ್ ಫೋರಂ ಕ್ರಿಯೇಟ್ ಮಾಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಇನ್ನೊಂದು ಸನ್ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, It may not pertaining to this bill also. ಇವತ್ತು ಸೌಹಾರ್ದ ಕಾಯ್ದೆಯಡಿ ಬರುತ್ತಿರುವ ಸಹಕಾರಿಗಳ ಭಾವನೆಗಳಿಗೂ ನೀವು ಸ್ಪಂದಿಸುತ್ತಿಲ್ಲ. ಕೋ–ಆಪರೇಟಿವ್ ಆಕ್ಟ್ ಕೆಳಗೆ ಬರುವಂತಹವರ ಭಾವನೆಗೂ ನೀವು ಸ್ಪಂದಿಸುತ್ತಿಲ್ಲವೆಂದು ನಾನು ಆರೋಪ ಮಾಡಬೇಕಾಗುತ್ತದೆ. ಮೊನ್ನೆ ತಾವೇನು ಬಡ್ಡಿ ರಿಯಾಯಿತಿಯನ್ನು ಕೊಟ್ಟಿದ್ದೀರಿ, ಅದು ಯಾರು willful defaulters ಇದ್ದಾರೆ ಅವರಿಗೆ ನೀವು ನಿರಂತರವಾಗಿ ಪ್ರೋತ್ಸಾಹ ಮಾಡುತ್ತಾ ಬರುತ್ತಿದ್ದೀರಿ, ಯಾರು willful defaulters ಇಲ್ಲ, ವಾಲೆಂಟರ್ಲಿ ಪೇ ಮಾಡುತ್ತಾರೆ, ಅವರಿಗೆ ಸ್ವಲ್ಪ ಇನ್ಸೆಂಟಿವ್ ಕೊಡತಕ್ಕ ರೀತಿಯಲ್ಲಿ ಸರ್ಕಾರ ಚಿಂತನೆ ಮಾಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಅದಕ್ಕೆ ಬಹಳ ಏನೂ ಆಗುವುದಿಲ್ಲ.. ಇವತ್ತು ನಾನೂರು ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡುತ್ತಿದ್ದೀರಿ. ಯಾರೂ ಪ್ರಾಮಾಣಿಕವಾಗಿ ನಲವತ್ತು, ನಲವತ್ತೈದು ಕೋಟಿ ಇಡೀ ರಾಜ್ಯದಲ್ಲಿ ಪೇ ಮಾಡಿದ್ದಾರೆ ಅವರ ಬಗ್ಗೆಯೂ ಸ್ವಲ್ಪ ಚಿಂತನೆ ಮಾಡಬೇಕೆಂದು ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಿಜಿಸ್ಟರ್ಡ್ ಸೊಸೈಟಿಗೂ ಆರ್.ಬಿ.ಐ.ಗೂ ಸಂಬಂಧವಿಲ್ಲ, ಬ್ಯಾಂಕ್ ಎನ್ನಬೇಕಾದರೆ ತಾವು ಹೇಳುವುದು ಸರಿ, ಆರ್.ಬಿ.ಐ. ಗೈಡ್‌ಲೈನ್ಸ್‌ನಲ್ಲಿ ಆಗಬೇಕು. ಸೌಹಾರ್ದ ಸಹಕಾರ ಸಂಘ ರಿಜಿಸ್ಟರ್ಡ್ ಆಗಿರುವವರು ಬ್ಯಾಂಕ್ ಆಗಬೇಕಾದರೆ ನ್ಯೂ ಅಪ್ಲಿಕೇಷನ್ ಹಾಕಿಕೊಳ್ಳುತ್ತಾರೆ, ಎಷ್ಟು ಷೇರ್ ಹೋಲ್ಡರ್ಸ್ ಇರಬೇಕು. ಯಾವ್ಯಾವ ಕ್ಯಾಟಗರಿಯಲ್ಲಿರಬೇಕು. ಎಷ್ಟು ಷೇರ್ ಅಮೌಂಟ್ ಇರಬೇಕೆಂದರೆ, R.B.I. will certainly permit a co-operative Bank. ಅದರಲ್ಲಿ ಎರಡನೇ ಮಾತಿಲ್ಲ. ಇದನ್ನೇ ಕನ್ವರ್ಟ್ ಮಾಡಬೇಕೆಂದರೂಕೂಡ, On the basis of turn over, they can apply before R.B.I. ನಾವೆಲ್ಲಾ ಆರ್.ಬಿ.ಐ. ನಲ್ಲಿ ಅರ್ಜಿ ಹಾಕಿದ್ದೇವೆ, ನಿಮ್ಮ ಸೌಹಾರ್ದ ಸಂಘವನ್ನು ಕನ್ವರ್ಟ್ ಮಾಡಿಕೊಳ್ಳಿ, ಸ್ವಂತದ್ದು ಮಾಡಿಕೊಳ್ಳಿ, ಇಷ್ಟು ಜನ ಷೇರ್‌ಹೋಲ್ಡರ್ಸ್ ಇರಬೇಕು, ಇಷ್ಟು ಅಮೌಂಟ್ ಇರಬೇಕು, ನೀವು ಯಾವ್ಯಾವ

ಆಕ್ಟಿವಿಟೀಸ್‌ಗೆ ಫೈನಾನ್ಸ್ ಮಾಡುತ್ತೀರಿ, ಮೋಡ್ ಆಫ್ ರಿಕವರಿ ಹೇಗೆ ಎನ್ನುವುದನ್ನು ಪ್ರೂವ್ ಮಾಡಿದರೆ, any number of co-operative banks can be started in India. ಆರ್.ಬಿ.ಐ. ಯಾರಿಗೇನೂ ಬಾಗಿಲು ಮುಚ್ಚಿಲ್ಲ. ಸೌಹಾರ್ದ ಕಾಯಿದೆಯನ್ನು ನಾವು ನಮ್ಮ ಕಂಟ್ರೋಲ್‌ಗೆ ತಗೆದುಕೊಳ್ಳಬೇಕು, ಆ ಸಂಘಗಳ ಮೇಲೆ ಹಿಡಿತ ಇಟ್ಟುಕೊಳ್ಳಬೇಕು, ಅವು ನಮ್ಮ ಕ್ಲಚ್‌ನಲ್ಲಿಲ್ಲ, ಏನಾದರೂ ಮಾಡಿ ಅವುಗಳನ್ನು ತಗೆದುಕೊಳ್ಳಬೇಕೆಂಬ ಉದ್ದೇಶವನ್ನಿಟ್ಟು ಕೊಂಡು ಈ ಕಾಯಿದೆಗಳನ್ನು ಮಾಡುತ್ತಾ ಹೋದರೆ, Dissolve this, you abandon the Act itself. ಸೌಹಾರ್ದ ಕಾಯಿದೆಯನ್ನೇ ರದ್ದು ಮಾಡಿ, bring every society under / Karnataka co-operative societies Act. ಇದಕ್ಕೂ ಅದಕ್ಕೂ ವ್ಯತ್ಯಾಸ ಇನ್ನೇನು ಉಳಿದಿದೆ ಕರ್ನಾಟಕ ಕೋ–ಆಪರೇಟಿವ್ ಸೊಸೈಟೀಸ್ ಆಕ್ಟ್ ಕೆಳಗೆ ರಿಜಿಸ್ಟರ್ಡ್ ಆಗಲಿ, ಆಡಿಟ್ ಆಗಲಿ, ಲಿಟಿಗೇಷನ್ ಎಲ್ಲಾ ಅಲ್ಲೇ ಇತ್ಯರ್ಥವಾಗಲಿ, when you give an appelate power to Registrar under souharda Act also, ಬೇರೆ ಏನಿದೆ, ರಿಜಿಸ್ಟ್ರಾರ್ ಮಾಡುವುದು ತಾವೇ ಮಾಡುವ ತೀರ್ಮಾನವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನಲ್ಲಾ, because, the Registrar in Karnataka is not an independent body. Like Gujarath. ನಿಮ್ಮ ಕಂಟ್ರೋಲ್‌ನಲ್ಲಿರುವ ರಿಜಿಸ್ಟ್ರಾರ್ ಏನು ಮಾಡುತ್ತಾರೆ? How can he give a judicious decision without yielding to pressure? ಆ ಅನುಮಾನ ಇದ್ದಾಗ ಬಿಟ್ಟುಬಿಡಿ ಸಿವಿಲ್‌ಕೋರ್ಟ್‌ಗೆ ಅವರು ಹೋಗಲಿ, Let them appeal before the civil courts. ಏತಕ್ಕೆ ನೀವು ರಿಜಿಸ್ಟ್ರಾರ್ ಕಂಟ್ರೋಲ್‌ಗೆ ತರುತ್ತೀರಿ, ಸಣ್ಣ ಕಂಟ್ರೋಲ್ ಅವರಿಗೆ ಕೊಡುತ್ತಿದ್ದಂತೆ ಪವರ್ ಡೆಲಿಗೇಟ್ ಆಗುತ್ತದೆ, ಡೆಪ್ಯುಟಿ ರಿಜಿಸ್ಟ್ರಾರ್ ಹೋಗುತ್ತಾನೆ, ಅಸಿಸ್ಟೆಂಟ್ ರಿಜಿಸ್ಟ್ರಾರ್ ಹೋಗುತ್ತಾನೆ ಸೊಸೈಟಿ ಒಳಗೆ ನನ್ನ ಮಾತನ್ನು ಕೇಳೆಂದು, Because the power will be delegated automatically. This power, if it is given to Registrar, tomorrow it may be delegatad to A:R. ಅವರು ಬಿಡುತ್ತಾರೆಯೇ?

ಶ್ರೀ ಆರ್. ವಿ. ದೇಶಪಾಂಡೆ : ನಾನು ಈಗಾಗಲೇ ಆರ್.ಬಿ.ಐ. ಲೆಟರ್ ಓದಿಹೇಳಿದೆ, Reserve Bank of India is not willing to consider convertion of Urban Banks into Souhardha Banks. Therefore, I am bound to move this Bill and get it passed. ನಾನು ನಿಮಗೆ ರಿಕ್ವೆಸ್ಟ್ ಮಾಡುತ್ತಿದ್ದೇನೆ,

ಇವತ್ತು ನಾವು ಈ ಬಿಲ್ ಪಾಸ್ ಮಾಡಲಿಲ್ಲವೆಂದರೆ, ಅರ್ಬನ್ಸ್ ಬ್ಯಾಂಕ್ಸ್ ಆಗಿ ಕನ್ವರ್ಟ್ ಮಾಡಬೇಕೆನ್ನುತ್ತಾರೆ, ಕನ್ವರ್ಟ್ ಮಾಡುವುದಕ್ಕಾಗುವುದಿಲ್ಲ. ಎರಡನೇಯದು, ಸೌಹಾರ್ದ ಆಕ್ಟ್ ಕೆಳಗೆ, ನಾನು ಈಗಾಗಲೇ ನಿಮಗೆ ಹೇಳಿದಂತೆ ಟೋಟಲ್ ಇಂಡಿಪೆಂಡೆನ್ಸ್ ಅವರಿಗಿದೆ. ಆಡಿಟ್ ಅನ್ನು ನಮ್ಮ ಆಡಿಟ್ ಡಿಪಾರ್ಟ್‌ಮೆಂಟ್ ಮಾಡುವುದಿಲ್ಲ, ಚಾರ್ಟರ್ಡ್ ಅಕೌಂಟೆಂಟ್ಸ್ ಮಾಡುತ್ತಾರೆ. ಮತ್ತೊಂದು ಮುಖ್ಯವಾದುದ್ದನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು, co-operative shall be deemed to be co-operative society for the purpose of Banking Registration Act,R.B.I. Act,NABARD Act, and deposit insurance credit corporation Act, under section 2(A). ಇವತ್ತು ನಾವು ಇದನ್ನು ಇಲ್ಲಿ ಅಮೆಂಡ್‌ಮೆಂಟ್ ಮಾಡಲಿಲ್ಲವೆಂದರೆ, even the depositors' interest will be at stake. ಮತ್ತೆ ರಿಜಿಸ್ಟ್ರಾರ್‌ಗೆ ಡೆಲಿಗೇಟ್ ಮಾಡುವ ಪ್ರಶ್ನೆಇಲ್ಲ, we have said Registrar will decide. ಮನಸ್ಸಿನಲ್ಲಿ ಸಂದೇಹ ಬಂದರೆ ತಪ್ಪೇನಲ್ಲ, ಆದರೆ ನಾನೇನು ಹೇಳುತ್ತಿದ್ದೇನೆಂದರೆ, ಇವತ್ತು ಒಂದು ಅಪೀಲ್ ಇರಬೇಕೆಂದು ಮಾಡಿದ್ದೇವೆ, ನೋಡೋಣ, we will just go ahead with this, ತಾವು ಹೇಳಿದಂತೆ ಹಸ್ತಕ್ಷೇಪ ಮಾಡುವುದು ಪ್ರಾರಂಭ ಮಾಡಿದರೆ, I will not hesitate again to come back.

ಶ್ರೀ ಶಿವಾನಂದ ಎಸ್.ಪಾಟೀಲ : ಈ 25 ಬಿ ಅನ್ನು ಡಿಲೀಟ್ ಮಾಡಿಬಿಡಿ ಮುಗಿದುಹೋಗುತ್ತದೆ, ರಿಜಿಸ್ಟ್ರಾರ್ ಮುಂದು ಅಪೀಲ್ ಹೋಗುವುದನ್ನು ಡಿಲೀಟ್ ಮಾಡಿಬಿಟ್ಟರೆ, rest of them, you can restore.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, We have no objection. If the Minister says, ಮಿನಿಸ್ಟರ್ ನಮಗೆ ಎಕ್ಸ್‌ಪೀರಿಯನ್ಸ್ ಆದ ಮೇಲೆ ವಾಪಸ್ ಬರುತ್ತೇವೆ ಎಂದು ಹೇಳುವುದಾದರೆ, I have no hesitation in bringing back the Bill, ಅಂದರೆ we have no objection. Let it be passed.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 6 ರವರೆಗೆ

ಉಪಾಧ್ಯಕ್ಷರು : "ಪ್ರಸ್ತಾವ ಏನೆಂದರೆ: ಖಂಡ 2 ರಿಂದ 6 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

("ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ, 2005 ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

(ಆ) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕ,2005

ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ